**ಅ. ದಾ. ಸಂ. ಃ 355 / 2016**
**ಪಿ.ಡಬ್ಲ್ಯೂ ಃ 01**

ದಿನಾಂಕ ಃ **04-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ. P.M.S.** ವಕೀಲರಿಂದ ಃ-

ನೀವು ಯಾವ ಪರಿಹಾರ ಕೋರಿ ದಾವೆ ಹೂಡಿರುತ್ತೀರಿ ಎಂದರೆ ಸಾಕ್ಷಿ ನಮ್ಮ ತಾತನ ಸ್ವತ್ತು ಎಂದು ದಾವೆ ಹೂಡಿರುತ್ತೇನೆಂದು ನುಡಿಯುತ್ತಾರೆ. ನಾನು ಮುತ್ತಯ್ಯನಪಾಳ್ಯ ಗ್ರಾಮದಲ್ಲಿ ವಾಸವಿರುತ್ತೇನೆ. ನನ್ನ ತಾಯಿಯ ಹೆಸರು ಸಿದ್ದಗಂಗಮ್ಮ. ಸಿದ್ದಗಂಗಮ್ಮನವರಿಗೆ ಇಬ್ಬರು ಗಂಡು ಮಕ್ಕಳು, ಅವರುಗಳೆಂದರೆ ನಾಗೇಶ್ ಮತ್ತು ಮಂಜುನಾಥನಾದ ನಾನು. ನಾನು 1 ನೇ ಪ್ರತಿವಾದಿಯ ಮೊದಲ ಹೆಂಡತಿ ಮಗ. ನಾನು 1 ನೇ ಪ್ರತಿವಾದಿಯ ಮಗ ಎಂದು ತೋರಿಸಲು ಆಧಾರ್ ಕಾರ್ಡ್ ಮತ್ತು ವರ್ಗಾವಣೆ ಪ್ರಮಾಣಪತ್ರ ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ನೀಡಿರುತ್ತೇನೆ. 1 ನೇ ಪ್ರತಿವಾದಿಯ ಹೆಂಡತಿ ನಿಮ್ಮ ತಾಯಿ ಎಂದು ತೋರಿಸಲು ಏನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾನು ಲಗ್ನಪತ್ರಿಕೆ ಮತ್ತು ಫೋಟೋವನ್ನು ಹಾಜರು ಪಡಿಸಿರುತ್ತೇನೆ.

2. ಈಗ ನಾನು, ನನ್ನ ತಾಯಿ ಹಾಗೂ ನನ್ನ ಅಣ್ಣ-ಅತ್ತಿಗೆ ಜೊತೆಯಲ್ಲಿರುತ್ತೇವೆ. ಲಗ್ನಪತ್ರಿಕೆ, ಫೋಟೋ ಬಿಟ್ಟು ನಿಮ್ಮ ತಾಯಿಯವರ ಆಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಆಧಾರ್ ಕಾರ್ಡ್ ಮುಂದಿನ ದಿನಾಂಕದಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯಲ್ಲಿ 1 ನೇ ಪ್ರತಿವಾದಿಯ ಜೊತೆ ನಾವೇ ಉಳುಮೆ ಮಾಡಿಕೊಂಡು ಇದ್ದೇವೆಂದು ಬರೆಯಿಸಿರುತ್ತೇವೆಂದರೆ ಸರಿ. ಸರ್ವೆ ನಂಬರ್-

19 ರಲ್ಲಿ 1 ಎಕರೆ 7 ಗುಂಟೆ ನನ್ನ ತಂದೆಗೆ ಇದ್ದು, ಸದರಿ ಜಮೀನಿನಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪಂದಿರ ವ್ಯವಸಾಯ ಮಾಡಿಕೊಂಡಿರುತ್ತೇವೆಂದು ನುಡಿಯುತ್ತಾರೆ. ದಾವ ಸ್ವತ್ತು ಮರಿಕುಪ್ಪೆ ಗ್ರಾಮದಲ್ಲಿರುತ್ತದೆ. ದಾವ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ-ಎಂ.ಸಿ. ಗಂಗಣ್ಣ, ಪಶ್ಚಿಮಕ್ಕೆ-ನಾಗರಾಜು, ಉತ್ತರಕ್ಕೆ-ಎಂ.ಸಿ. ಗಂಗಣ್ಣ ಮತ್ತು ದಕ್ಷಿಣಕ್ಕೆ-ಎಂ.ಸಿ. ಗಂಗಣ್ಣನವರು ಇರುತ್ತಾರೆ.

3. ದಾವ ಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತು. ನನ್ನ ತಾತನವರು ಅನಾರೋಗ್ಯವಿದ್ದಾಗ ನನ್ನ ತಂದೆಯವರು ವಿಭಾಗ ಮಾಡಿಸಿಕೊಂಡಿರುತ್ತಾರೆ. ನನ್ನ ತಾತ ಸುಮಾರು 12-13 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಿಮ್ಮ ತಾತನವರು 20-30 ವರ್ಷಗಳ ಹಿಂದೆಯೇ ಮರಣ ಹೊಂದಿರುತ್ತಾರೆ, ನೀವು ಒಟ್ಟು ಕುಟುಂಬದಲ್ಲಿ ವಾಸವಾಗಿರುವುದಿಲ್ಲ, ಆಗಾಗಿ ದಾವ ಸ್ವತ್ತಿನ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**